ಈ) ಸದರಿ ಬಂದೀಖಾನೆಯ ಮೇಲ್ದರ್ಜೆಗೇರಿಸಲು ಮತ್ತು ಅಗತ್ಯವಾದ ಕಟ್ಟಡಗಳು ಮತ್ತು ಮೂಲಭೂತ ಸೌಲಭ್ಯ ಒದಗಿಸಲು ಸರಕಾರ ಯಾವ ಯೋಜನೆಯನ್ನು ಕೈಗೊಳ್ಳಲಿದೆ? ತಿಳಿಸುವುದು.

ಶ್ರೀ ರಾಜ ಅಮರೇಶ್ವರ ನಾಯಕ್ (ಬಂದೀಖಾನೆ ಸಚಿವರು):

ಅ) 1858 ರಲ್ಲಿ ಪ್ರಾರಂಭಿಸಲಾಗಿದೆ. ಇಲ್ಲಿನ ಭೂ ಪ್ರದೇಶದ ವಿಸ್ತೀರ್ಣ 70 ಎಕರೆ 20 ಗುಂಟೆ.

ಆ) ಜಿಲ್ಲಾ ಉಪ ಕಾರಾಗೃಹ, ಧಾರವಾಡ:

ಇಲ್ಲಿ ಎಲ್ಲಾ ತರಹದ ಅಪರಾಧ ಎಸಗಿರುವ ವಿಚಾರಣಾ ಬಂದಿಗಳನ್ನು ಮತ್ತು 3 ತಿಂಗಳ ಒಳಗಿನ ಅವಧಿಗೆ ಶಿಕ್ಷೆಯಾದ ಸಜಾ ಬಂದಿಗಳನ್ನು ಇಲ್ಲಿ ಇಡಲಾಗುವುದು.

18 ರಿಂದ 25 ವರ್ಷ ವಯೋಮಿತಿ ಒಳಗಿನ 47 ಪುರುಷ ಬಂದಿಗಳು.

16 ರಿಂದ 21 ವಯೋಮಿತಿ ಒಳಗಿನ 74 ಪುರುಷ + 7 ಮಹಿಳಾ ಬಂದಿಗಳು

21 ರಿಂದ 50 ವಯೋಮಿತಿ ಒಳಗಿನ 80 ಪುರುಷ + 15 ಮಹಿಳಾ ಬಂದಿಗಳು

50 ರಿಂದ 70 ವಯೋಮಿತಿ ಒಳಗಿನ 46 ಪುರುಷ ವಿಚಾರಣಾಧೀನ ಬಂದಿಗಳು ಇರುತ್ತಾರೆ.

ಇ) ವಿವಿಧ ಸಂಘ ಸಂಸ್ಥೆಗಳ ನೆರವಿನೊಂದಿಗೆ ಬಂದಿಗಳ ಪುನಃ ಪರಿವರ್ತನೆಗಾಗಿ ಶಿಬಿರಗಳನ್ನು ಆಯೋಜಿಸಲಾಗುತ್ತಿರುತ್ತದೆ.

ವಯಸ್ಕರ ಶಿಕ್ಷಣ ಇಲಾಖೆಯ ಸಹಾಯದಿಂದ ಅನಕ್ಷರಸ್ಥ ಬಂದಿಗಳನ್ನು ಅಕ್ಷರಸ್ಥರನ್ನಾಗಿ ಮಾಡಲು ಶಾಲೆಗಳು ನಡೆಯುತ್ತಿವೆ.

ಸಂಸ್ಥೆಯ ಬಂದಿಗಳ ಮಾನವ ಶಕ್ತಿಯನ್ನು ಸದುಪಯೋಗಿಸಿಕೊಳ್ಳಲು ಅನುವಾಗುವಂತೆ ಬಡಗಿತನ, ನೇಯ್ಗೆ, ಹೊಲಿಗೆ ಮತ್ತು ತೋಟಗಾರಿಕೆಯಿಂದ ವಿವಿಧ ಕೈಗಾರಿಕೆಗಳು ಚಾಲ್ತಿಯಲ್ಲಿರುತ್ತವೆ.

ಈ) ಅನುದಾನ ಲಭ್ಯತೆಯ ಆಧಾರದ ಮೇಲೆ ಇದನ್ನು ಹಂತ ಹಂತವಾಗಿ ಕೈಗೊಳ್ಳಲಾಗುವುದು.

ಧಾರವಾಡ ಜಿಲ್ಲೆಯಲ್ಲಿ ಜಲಸಂವರ್ಧನೆಗೆ ಸಂಘಗಳ ಕಾರ್ಯಗಳು

301(702) - ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ): ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆಯಲ್ಲಿ ಪ್ರಾರಂಭಿಸಿರುವ ಜಲಸಂವರ್ಧನೆಯ ಸಂಘಗಳ ವಿವರವನ್ನು ತಾಲ್ಲೂಕುವಾರು ಮಾಹಿತಿ ನೀಡುವುದು ಮತ್ತು ಎಂದಿನಿಂದ ಕೆಲಸ ಪ್ರಾರಂಭವಾಗಿರುವುದು; (ವಿವರ ನೀಡುವುದು)

ಅ) ಪ್ರತಿಯೊಂದು ಜಲಾನಯನ (ಕೆರೆಯ) ನೀರಾವರಿಯಾಗುವ ಭೂ ಪ್ರದೇಶದ ವಿವರ ಹಾಗೂ ಖರ್ಚು ಮಾಡುವ ಅಂದಾಜು ಹಣದ ವಿವರ ತಿಳಿಸುವುದು, ಇದರಿಂದ ಪ್ರಯೋಜನ ಪಡೆಯುವ ರೈತ ಕುಟುಂಬಗಳ ವಿವರ ನೀಡುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು):

ಅ) ಸರ್ಕಾರವು ಜಲಸಂವರ್ಧನೆ ಯೋಜನೆಯಡಿಯಲ್ಲಿ ಆರು ಕೃಷಿ ಭೌಗೋಳಿಕ ವಲಯಗಳ ಆಧಾರದ ಮೇಲೆ ಆಯ್ಕೆ ಮಾಡಿರುವ 9 ಜಿಲ್ಲೆಗಳಲ್ಲಿ ಧಾರವಾಡ ಜಿಲ್ಲೆಯು ಸೇರ್ಪಡೆಯಾಗಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಬಸವನಬಾಗೇವಾಡಿಯಲ್ಲಿ ಬಸ್ ಘಟಕ ಪ್ರಾರಂಭಿಸುವುದು

302(736) - ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನಬಾಗೇವಾಡಿ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ಜಿಲ್ಲೆಯಲ್ಲಿ ಹಾಲಿ ಎಷ್ಟು ಬಸ್ ಘಟಕಗಳು ಅಸ್ತಿತ್ವದಲ್ಲಿವೆ. ಎಲ್ಲೆಲ್ಲಿವೆ ವಿವರ ನೀಡುವುದು;

ಆ) ಇವುಗಳ ಜೊತೆಯಲ್ಲಿ ನೂತನವಾಗಿ ಬಸ್ ಘಟಕಗಳನ್ನು ಸ್ಥಾಪಿಸುವ ವಿಚಾರ ಸರ್ಕಾರಕ್ಕಿದೆಯೇ;

ಇ) ಇದ್ದಲ್ಲಿ, ಎಲ್ಲೆಲ್ಲಿ, ಯಾವಾಗ ಪ್ರಾರಂಭಿಸಲಾಗುವುದು;

ಈ) ಬಸವನ ಬಾಗೇವಾಡಿ ಬಸ್ ಘಟಕವು ಯಾವಾಗ ಮಂಜೂರು ಮಾಡಲಾಯಿತು. ಇದರ ಕಾಮಗಾರಿಯನ್ನು ಯಾವಾಗ ಕೈಗೆತ್ತಿಕೊಳ್ಳಲಾಗುತ್ತದೆ., ಯಾವಾಗ ಪೂರ್ಣಗೊಳಿಸಲಾಗುವುದು.

ಉ) ಕಾಮಗಾರಿ ಅನುಷ್ಠಾನಕ್ಕಿರುವ ಅಡೆತಡೆಗಳೇನು; ಎಷ್ಟು ಹಣ ಮಂಜೂರಾಗಿದೆ?

ಶ್ರೀ ಬಿ. ರಾಮನಾಥ್ ರೈ (ಸಾರಿಗೆ ಸಚಿವರು):

ಅ) ವಿಜಾಪುರ ಜಿಲ್ಲೆಯಲ್ಲಿ ಪ್ರಸ್ತುತ 5 ಘಟಕಗಳು ಅಸ್ತಿತ್ವದಲ್ಲಿವೆ. ಅವುಗಳು ಅನುಕ್ರಮವಾಗಿ ವಿಜಾಪುರ ಘಟಕ-1 ಮತ್ತು 2, ಇಂಡಿ, ಸಿಂದಿಗಿ ಮುದೆಬಿಹಾಳ ಪಟ್ಟಣದಲ್ಲಿವೆ.

ಆ) ಇದೆ.

ಇ) ವಿಜಾಪುರ ಜಿಲ್ಲೆಯ ತಾಳೀಕೋಟೆಯಲ್ಲಿ ನೂತನವಾಗಿ ಬಸ್ ಘಟಕ ನಿರ್ಮಿಸಲಾಗಿದ್ದು, ಕಾಮಗಾರಿ ಪೂರ್ಣಗೊಳ್ಳುವ ಹಂತದಲ್ಲಿರುತ್ತದೆ. ಇದರೊಂದಿಗೆ ಬಸವನ ಬಾಗೇವಾಡಿಯಲ್ಲಿ ಬಸ್ ಘಟಕ ನಿರ್ಮಿಸುವ ಕುರಿತಂತೆ ಪ್ರಸ್ತಾವನೆ ಇರುತ್ತದೆ.

ಈ) ಜಮೀನು ಪಡೆದುಕೊಳ್ಳುವ ವಿಷಯದಲ್ಲಿ ಭೂಸ್ವಾಧೀನ ಪ್ರಕ್ರಿಯೆ ದಿನಾಂಕ:18-6-2002 ರಂದು ಪೂರ್ಣಗೊಂಡಿದ್ದು, ಭೂ ಸ್ವಾಧೀನತೆಯಲ್ಲಿರುವ ಜಮೀನಿನ ಕಬ್ಜಾವನ್ನು ಸಂಸ್ಥೆಗೆ ವಹಿಸಿಕೊಟ್ಟ ನಂತರ, ಬಸ್ ಘಟಕದ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು.